ಸಿ. ಸಿ. ನಂ. 17/2022
ಪಿ.ಡಬ್ಲ್ಯೂ-2
ಸಿ.ಡಬ್ಲ್ಯೂ-2

ದಿನಾಂಕ.13-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು:** ಆರೋಪಿಪರ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

07. ನಾನು ಬಾಲಚಂದ್ರ ನಾಯಕ ಎಂಬುವರ ವಿರುದ್ದದ ಪ್ರಕರಣದಲ್ಲಿ ಕೂಡ ಸಾಕ್ಷಿ ನುಡಿದಿದ್ದೇನೆ ಎಂದರೆ ಸಾಕ್ಷಿ ನಾನು ಆ ಪ್ರಕರಣದಲ್ಲಿ ಸಾಕ್ಷಿ ಹೇಳಿಲ್ಲ, ಸಹಿ ಮಾತ್ರ ಹಾಕಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಜೊತೆ ಸಾಕ್ಷ ನುಡಿಯಲು ಬಂದಿರುವ ವ್ಯಕ್ತಿಯ ಹೆಸರು ಮೋಹನ್ ಶಾಂಬಾ ನಾಯ್ಕ. ಶಿರಕುಳಿ ಗ್ರಾಮದಿಂದ ನವಗದ್ದೆ ಅರಣ್ಯ ಪ್ರದೇಶಕ್ಕೆ 22 ಕಿ. ಮೀ ಅಂತರ ಇದೆ ಎಂದರೆ ಸರಿ. ಸದ್ರಿ ಮೋಹನ ಶಾಂಬಾ ನಾಯ್ಕ ನವಗದ್ದೆ ಗ್ರಾಮದವರು. ಸದ್ರಿ ಮೋಹನ್ ರವರ ಮನೆಯಿಂದ ನಾನು ಹೋಗಿದ್ದೆ ಎಂದು ಹೇಳುವ ಸ್ಥಳ 8 ಕಿ. ಮೀ ದೂರದಲ್ಲಿದೆ. ನಾನು 18 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ಸದ್ರಿ ಮೋಹನ್ ರವರು ನನಗಿಂತ ಮುಂಚಿನಿಂದಲೂ ದಿನಗೂಲಿ ನೌಕರರಾಗಿದ್ದರು. ಪ್ರತಿಯೊಂದು ಅರಣ್ಯ ಪ್ರದೇಶಕ್ಕೂ ಬೇರೆ ಬೇರೆ ದಿನಗೂಲಿ ನೌಕರರು ಇರುತ್ತಾರೆ. ದಿನಗೂಲಿ ನೌಕರರು ಬೇರೆ ಕಡೆ ಕರ್ತವ್ಯ ಮಾಡಲು ಮೇಲಾಧಿಕಾರಿಗಳ ಅನುಮತಿ ಬೇಕು ಎಂದರೆ ಸರಿ. ದಿನಗೂಲಿ ನೌಕರರು ಮೇಲಾಧಿಕಾರಿಗಳು ಹೇಳಿದ ಕೆಲಸ ಮಾಡಬೇಕಾಗುತ್ತದೆ ಎಂದರೆ ಸರಿ. ಅವರು ಇಂತ ಕಡೆ ಹೋಗಬೇಕು ಎಂದು ಹೇಳಿದ್ದಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿ. ದಾಖಲೆಗಳಿಗೆ ಸಹಿ ಮಾಡಬೇಕು ಎಂದು ಅವರು ಸೂಚಿಸಿದರೆ ನಾವು ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ.

8. ನನಗೆ ಮಧ್ಯಾಹ್ನ 1 ಗಂಟೆಗೆ ಈ ಪ್ರಕರಣದಲ್ಲಿ ಪಂಚನಾಗಿ ಸಹಕರಿಸಲು ಹೇಳಿದರು. ಆ ರೀತಿ ಹೇಳಿರುವದು ಆರ್.ಎಫ್.ಓ. ಕಚೇರಿಯಲ್ಲಿ. ನಾನು ಹಾಗೂ ಮೋಹನ್ 1 ಕಾಲು ಗಂಟೆಗೆ ಆರ್.ಎಫ್.ಓ.ಕಚೇರಿಯಲ್ಲಿ ಸೇರಿದೆವು. ಕಚೇರಿಯಲ್ಲಿ ಆಗ ಡಿ. ಆರ್.ಎಫ್.ಓ. ಇದ್ದರು. ಚಾಸ–5 ರಿಂದ ಚಾಸಾ–7 ಕೂಡಾ ಅಲ್ಲಿ ಇದ್ದರು . ಆರ್.ಎಫ್.ಓ. ಅಲ್ಲಿ ಇರಲಿಲ್ಲ. ಆರ್.ಎಫ್.ಓ. ಅಲ್ಲಿ ಯಾಕೆ ಇರಲಿಲ್ಲ ಎಂದು ನನಗೆ ಗೊತ್ತಿಲ್ಲ. ಅಲ್ಲಿ ನಾವು 10 ನಿಮಿಷ ಮಾತನಾಡಿಕೊಂಡೆವು. ಚಾಸಾ–5 ರಿಂದ 7 ರವರು ಸಾಕ್ಷಿಗಳು ಎಂದು ನಮಗೆ ಹೇಳಿಲ್ಲ.ಚಾಸಾ–1 ರವರು ಈ ಪ್ರಕರಣದ ಪಿರ್ಯಾದಿ ನನಗೆ ಹೇಳಿಲ್ಲ. ನನಗೆ ಮಾಹಿತಿ ಕಚೇರಿಗೆ ಬಂದಿದೆ ಎಂದು ಹೇಳಿದರು. ಕಚೇರಿಯಲ್ಲಿ ಸ್ಥಿರ ದೂರವಾಣಿ ಸಂಪರ್ಕ ಇದೆ. ನಾನು 18 ವರ್ಷಗಳಿಂದ 10 ರಿಂದ 15 ಪಂಚನಾಮೆಗಳಿಗೆ ಸಹಿ ಮಾಡಿದ್ದೇನೆ. ಸ್ಧ್ರಿ ಮೋಹನ್ ರವರು ಐದಾರು ಪಂಚನಾಮೆಗಳಿಗೆ ನನ್ನ ಮಾಹಿತಿ ಪ್ರಕಾರ ಸಹಿ ಮಾಡಿದ್ದಾರೆ. ಪಂಚಾನಾಮೆಗೆ ಸಹಿ ಮಾಡಿದಾಗ ಸಾಕ್ಷಿ ನುಡಿಯಲು ಹೋಗಬೇಕು ಎಂದು ಮೇಲಾಧಿಕಾರಿಗಳು ಹೇಳಿರುತ್ತಾರೆ ಎಂದರೆ ಸಾಕ್ಷಿ ಮೇಲಾಧಿಕಾರಿಗಳು ಬೇಕಾದಾಗ ಸಹಿ ಮಾಡಿಸಿರುತ್ತಾರೆ, ಆದರೆ ಸಾಕ್ಷಿ ನುಡಿಯಲು ನಾವು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನಾವು ಕೆಲವು ಸಾರಿ ಕೆಲಸದಲ್ಲಿದ್ದಾಗ ನಮಗೆ ಹೋಗಲು ಆಗದೇ ಇದ್ದಾಗ ನಂತರ ನಮ್ಮಿಂದ ಸಹಿಯನ್ನು ಮೇಲಾಧಿಕಾರಿಗಳು ಪಡೆದಿರುತ್ತಾರೆ ಎಂದರೆ ಸರಿ.

09. ಕಚೇರಿಯಿಂದ ಮಧ್ಯಾಹ್ನ 1 ವರಗೆ ಬಿಟ್ಟ ನಂತರ ಬಾಳೇಗುಳಿಯಲ್ಲಿ ನಮ್ಮ ಜೀಪ್ ನ್ನು ನಿಲ್ಲಿಸಿಲ್ಲ. ಮಧ್ಯದಲ್ಲಿ ನಮ್ಮ ಜೀಪ್ ನ್ನು ಎಲ್ಲೂ ನಿಲ್ಲಿಸಿಲ್ಲ. ಜೀಪ್ ನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಆಗೇರ ಜಾತಿಗೆ ಸೇರಿದ ಒಬ್ಬರು ಚಾಲಾಯಿಸುತ್ತಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ

ಸಿ. ಸಿ. ನಂ. 17/2022
ಪಿ.ಡಬ್ಲ್ಯೂ-2
ಸಿ.ಡಬ್ಲ್ಯೂ-2

ಅವರ ಹೆಸರನ್ನು ಹೇಳಿಲ್ಲ. ಅವರ ಹೆಸರು ಹೇಳಬೇಡಾ ಎಂದು ನನಗೆ ಯಾರು ಹೇಳಿಲ್ಲ. ನನ್ನ ಹೇಳಿಕೆಯನ್ನು ಫಾರೇಸ್ಟ್ ರು ಓದಿ ಹೇಳಿದ್ದಾರೆ. ನನಗೆ ಮೊದಲು ಪಂಚನಾಮೆ ಮಾಡಿರುವ ಬಗ್ಗೆ ಅನುಭವ ಇಲ್ಲ. ಪಂಚನಾಮೆಯನ್ನು ಈ ರೀತಿಯಾಗಿ ಹೇಳಿ ಬರೆಸಬೇಕು ಎಂದು ನನಗೆ ಗೊತ್ತಿರಲಿಲ್ಲ. ಆ ರೀತಿ ಹೇಳಿ ಬರೆಸಬೇಕು ಎಂದು ನನಗೆ ಅನುಭವ ಇರಲಿಲ್ಲ. ಮೇಲಾಧಿಕಾರಿಗಳು ಪಂಚನಾಮೆಯನ್ನು ಹೇಳಿ ಬರೆಸುವುದನ್ನು ಆ ತನಕ ನಾನು ನೋಡಿರಲಿಲ್ಲ. ಪಂಚನಾಮೆ ಬರೆಸುವಲ್ಲಿ ನಮ್ಮ ಮೇಲಾಧಿಕಾರಿಗಳಾದ ಆರ್.ಎಫ್.ಓ. , ಡಿ .ಆರ್.ಎಫ್.ಓ. , ಫಾರೇಸ್ಟರು , ಅರಣ್ಯ ರಕ್ಷಕ ರು ಅನುಭವಸ್ಥರು ಎಂದರೆ ಸರಿ. ಪಂಚನಾಮೆಯನ್ನು ಆ ಅನುಭವಸ್ಥರು ಬರೆಸಿದ್ದಕ್ಕೆ ನಾನು ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ.

10. ನಾನು ಹೇಳಿದಂತಹ ಜೀಪು ನಮ್ಮ ಕಚೇರಿಯ ಆರ್.ಎಫ್.ಓ. ರವರ ಜೀಪು ಎಂದರೆ ಸರಿ. ಆದ್ದರಿಂದ ಆ ಜೀಪಿನ ಚಾಲಕ ಅರಣ್ಯ ಇಲಾಖೆಯವರು ಇರುತ್ತಾರೆ ಎಂದರೆ ಸರಿ. ಆ ದಿನ ಜೀಪಿನಲ್ಲಿ 6 ಜನ ಇದ್ದೆವು. ಬೋಗರಿಬೈಲ್ ಗೆ ತಲುಪಿದಾಗ ನನ್ನ ಪ್ರಕಾರ ಮಧ್ಯಾಹ್ನ 1-45 ಆಗಿತ್ತು. ನಾನು 5 ನೇ ತರಗತಿ ತನಕ ಶಾಲೆಗೆ ಹೋಗಿದ್ದು, ನಪಾಸಾಗಿದ್ದೇನೆ. . ನಾನು ಮೊದಲು ಆಚಾರಿ ಕೆಲಸಕ್ಕೆ ಹೋಗುತ್ತಿದ್ದೆ , ನಂತರ ಸೆಂಟ್ರಿಂಗ್ ಕೆಲಸಕ್ಕೆ ಹೋಗುತ್ತಿದ್ದೆ ಹಾಗೂ ಈಗ ಈ ಕೆಲಸಕ್ಕೆ ಹೋಗುತ್ತಿದ್ದೇನೆ. ಆಚಾರಿ ಕೆಲಸಕ್ಕೆ 1 ವರ್ಷ ಕ್ಕೆ ಹೋಗಿದ್ದು, ನಾನು ಅದರಲ್ಲಿ ಪರಿಣಿತಿ ಹೊಂದಿಲ್ಲ. 5 ನೇ ತರಗತಿ ತನಕ ನಪಾಸದವರಿಗೆ ವ್ಯವಹಾರಿಕ ಜ್ಞಾನ ಕಡಿಮೆ ಇರುತ್ತದೆ ಎಂದರೆ ಸರಿ. ನಪಾಸಾದವರನ್ನು ಶಾಲೆ ಬಿಡಿಸಿ ಕೆಲಸಕ್ಕೆ ಹೋಗಲು ಹೇಳುತ್ತಾರೆ ಎಂದರೆ ಸರಿ.

11. ನವಗದ್ದೆ ಗೆ ಅರಣ್ಯಕ್ಕಿಂತ ಮುಂಚೆ 50 ಮೀಟರ ದೂರದಲ್ಲಿ ಜೀಪ್ ನ್ನು ನಿಲ್ಲಿಸಲಾಗಿತ್ತು. ನವಗದ್ದೆ ಅರಣ್ಯ ಪ್ರದೇಶಕ್ಕೆ ಹೋಗಲು ಕಾಲು ದಾರಿಯ ಮುಂಚೆ 2 ಚಂದ್ರಾಕಾರದ ತಿರುವು ಸಿಗುತ್ತದೆ ಎಂದರೆ ಸರಿ. ಆ 2 ನೇ ಚಂದ್ರಾಕಾರದ ತಿರುವು ಕೊನೆಯಾಗುವಾಗ ಸನ್ಯಾಸಿಮಡಿ ಹಳ್ಳದ ಬಳಿ 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿ ಸಿಗುತ್ತದೆ. ಆ 2 ನೇ ತಿರುವಿನಲ್ಲಿ ಜೀಪ್ ನಿಲ್ಲಿಸಿದ್ದು. ಆ ಸನ್ಯಾಸಿಮಡಿ ಹಳ್ಳ ಜೀಪು ನಿಲ್ಲಿಸಿದ ಬಲಭಾಗಕ್ಕೆ ಬರುತ್ತದೆ. ಸನ್ಯಾಸಿಮಡಿ ಹಳ್ಳ ಎಡಭಾಗದಲ್ಲಿ ಕಾಲುದಾರಿ ಸೇರುತ್ತದೆ. ಕಾಲುದಾರಿಯಾದ ಮೇಲೆ ಸನ್ಯಾಸಿ ಮಡಿ ಹಳ್ಳದ ಪಕ್ಕದಲ್ಲಿ ಮಾಲ್ಕೀ ಜಮೀನು ಇದೆ. ಸದ್ರಿ ಮಾಲ್ಕಿ ಜಮೀನು ರಾಷ್ಟ್ರಿಯ ಹೆದ್ದಾರಿಗೆ ಹೊಂದಿಕೊಂಡು 1 ಸಾವಿರ ಮೀಟರ ತನಕ ಇದೆ. ಕಾಲುದಾರಿಗೆ ತಾಗಿ ಡಾಂಬರ್ ರಸ್ತೆ ಇದೆ ಎಂದರೆ ಸರಿ. ಸದ್ರಿ ಡಾಂಬರ್ ರಸ್ತೆ 10 ರಿಂದ 12 ಫೂಟ್ ಅಡಿ ಅಗಲ ಇದೆ ಎಂದರೆ ಸರಿ. ಆ ಡಾಂಬರ್ ರಸ್ತೆಯ ಮತ್ತೇ ಪೂರ್ವಕ್ಕೆ ಬಸ್ ನಿಲ್ದಾಣ ಇದೆ ಎಂದರೆ ಸರಿ. ಬಸ್ ನಿಲ್ದಾಣಕ್ಕೆ ಪಕ್ಕಕ್ಕೆ 1 ಗೂಡಂಗಡಿ ಇದೆ ಎಂದರೆ ಸರಿ. ಗೂಡಂಗಡಿಯಿಂದ ಕಂಚಿನಬಾಗಿಲ ದೇವಸ್ಥಾನ ಕಾಣುತ್ತದೆ ಎಂದರೆ ಸರಿ. ಕಂಚಿನಬಾಗಿಲ ದೇವಸ್ಥಾನದಲ್ಲಿ ವಾಹನ ಪ್ರಯಾಣಿಕರು ನಿಲ್ಲಿಸಿ ಪೂಜೆ ಮಾಡಿಸಿ ಹೋಗುತ್ತಾರೆ ಎಂದರೆ ಸರಿ. ಮದ್ಯಾಹ್ನ 12 ಗಂಟೆ ಹೊತ್ತಿಗೆ ಆ ದೇವಸ್ಥಾನದಲ್ಲಿ ಮಧ್ಯಾಹ್ನದ ಪೂಜೆ ಸಮಯ ಎಂದರೆ ಸರಿ. ಅಲ್ಲಿ ನರಸಿಂಹ ದೇವಸ್ಥಾನ ಕೂಡಾ ಇದ್ದು ಅದಕ್ಕೆ ಭಕ್ತರು ಬರುತ್ತಾರೆ ಎಂದರೆ ಸಾಕ್ಷಿ ಬಂದು ಹೋಗುತ್ತಾರೆ ನಾನು ಹೋಗುವುದಿಲ್ಲ ಎಂದು ನುಡಿಯುತ್ತಾರೆ.

12. ಕಾಲು ದಾರಿಯಿಂದ ಯಲ್ಲಾಪುರದ ಕಡೆಗೆ ಮುಂದೆ ಹೋಗಿ 50 ಮೀಟರ್ ದೂರದಲ್ಲಿ ಜೀಪ್ ನ್ನು ನಿಲ್ಲಿಸಲಾಗಿತ್ತು. ಜೀಪಿನಲ್ಲಿ ಇದ್ದ ಎಲ್ಲಾ ಸಿಬ್ಬಂದಿಗಳು ಬೈಕು ಕಂಡಿತು ಎಂದು ಹೇಳಿದ್ದಾರೆ.

ಬೈಕ್ ನಂಬರನ್ನು ನನಗೆ ಮೊದಲೇ ಹೇಳಿಲ್ಲ. ಆರೋಪಿಗಳು ಬೈಕ್ ನ ಹತ್ತಿರ ಬಂದವರು 50 ಮೀಟರ್ ದೂರದಲ್ಲಿದ್ದ ಸಿಬ್ಬಂದಿಗಳನ್ನು ನೋಡಿ ಓಡಲು ಪ್ರಾರಂಭಿಸಿದರು. ಸಿಬ್ಬಂದಿಗಳು ಅವರನ್ನು ಎಷ್ಟು ದೂರ ಓಡಿಸಿ ಹಿಡಿದರು ಎಂದು ಗೊತ್ತಿಲ್ಲ. ನಾವು ಪಂಚರು ಅವರನ್ನು ಹಿಡಿಯಲು ಹೋಗಿಲ್ಲ. ನಾವು ದಿನಗೂಲಿ ನೌಕರರು. ನಮಗೆ ಸಂಬಳ ಅರಣ್ಯ ಇಲಾಖೆಯಿಂದ ನೀಡುವುದು ಹಾಗೂ ಆದ್ದರಿಂದ ಇಲಾಖೆ ಕರ್ತವ್ಯ ನಮ್ಮ ಕರ್ತವ್ಯ ಎಂದರೆ ಸರಿ. ನಾವು ಪಂಚರು ಹಾಗಾಗಿ ಅವರನ್ನು ಹಿಡಿಯಲು ಬೆನ್ನಟ್ಟಬಾರದು ಎಂದು ಸಿಬ್ಬಂದಿಗಳು ಹೇಳಿಲ್ಲ. ನಮಗೆ ಬೆನ್ನಟ್ಟಲು ತೊಂದರೆ ಇರಲಿಲ್ಲ. ಬೈಕ್ ನ ಬಳಿ ನಾವು ಇಬ್ಬರು ನಿಂತಿದ್ದೇವು. ಆ ಬೈಕ್ ನ ಹತ್ತಿರದಿಂದ ಸಿಬ್ಬಂದಿಗಳು ಅವರನ್ನು ಹಿಡಿದರು ಎಂದು ಹೇಳುವ ಸ್ಥಳ ಕಾಣುತ್ತಿರಲಿಲ್ಲ. ಆ ಸ್ಥಳ ನಮಗೆ ಯಾವ ಕಾರಣದಿಂದ ಕಾಣುತ್ತಿರಲಿಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. 4 ಜನ ಇದ್ದ ಸಿಬ್ಬಂದಿಗಳು ಎಲ್ಲರು ಅವರನ್ನು ಹಿಡಿಯಲು ಹೋಗಿದ್ದರು. ಅವರನ್ನು ಹಿಡಿದರು ಎಂದು ಅವರು ಹಿಡಿಯಲು ಹೋದ ಮುಕ್ಕಾಲು ಗಂಟೆಗೆ ಗೊತ್ತಾಯಿತು.

13. ನಾನು ಹೇಳಿದಂತಹ ಚೀಲ ಬೈಕಿನ ಬಳಿ ಬಿದ್ದಿತ್ತು . ನಾವು ಇಬ್ಬರು ಆ ಚೀಲವನ್ನು ಪರೀಶಿಲಿಸಲು ಹೋಗಿರುವುದಿಲ್ಲ. ಆ ಚೀಲವನ್ನು ಆರೋಪಿಗಳನ್ನು ಹಿಡಿದುಕೊಂಡು ಬರುವ ತನಕ ನೋಡಬಾರದೆಂದು ನನಗೆ ಗೊತ್ತಿತ್ತು. ಆರೋಪಿಗಳನ್ನು ಕರೆದುಕೊಂಡು ಬಂದ ನಂತರ ಆ ಚೀಲದಲ್ಲಿ ಮಾಂಸ ಇರುವುದನ್ನು ಸಿಬ್ಬಂದಿಗಳಿಗೆ ತೋರಿಸಿದರು. ಶೋಧಾನಾ ಸಮುಚಿತವನ್ನು ಆ ಚೀಲವನ್ನು ಪರೀಶಿಲಿಸುವ ಮುಂಚೆ ಸಿಬ್ಬಂದಿಗಳು ತಯಾರಿಸಿಲ್ಲ. ಅಲ್ಲದೇ ಅಂತಹ ಸಮುಚಿತಕ್ಕೆ ನಮ್ಮಿಬ್ಬರ ಸಹಿ ಪಡೆದಿಲ್ಲ. ಆ ಚೀಲವನ್ನು ಆರೋಪಿಗಳನ್ನು ಹಿಡಿದು ತರುವ ತನಕ ಮುಟ್ಟ ಬಾರದು ಎಂದು ನನಗೆ ಯಾರು ಹೇಳಿಲ್ಲ. ಅದನ್ನು ಪರಿಶೀಲಿಸಬೇಕು ಎಂದು ಮಾನವ ಸಹಜ ಕುತುಹಾಲ ನಮಗಿಬ್ಬರಿಗೆ

ಹುಟ್ಟಲಿಲ್ಲ. ಮುಕ್ಕಾಲು ಗಂಟೆ ತನಕ ಆ ಬೈಕ್ ಬಳಿ ನಮ್ಮಿಬ್ಬರು ಬಿಟ್ಟು ಬೇರೆ ಯಾರು ಇರಲಿಲ್ಲ, ಆ ಚೀಲದಲ್ಲಿ ಮಾಂಸ ಇರುಬಹುದು ಎಂದು ನಾವು ಮುಟ್ಟಲು ಹೋಗಲಿಲ್ಲ.

14. 1 ನೇ ಆರೋಪಿಯನ್ನು ಹಿಡಿದ ಸ್ಥಳ ಜೀಪು ನಿಲ್ಲಿಸಿದ ಜಾಗದಿಂದ ಅರ್ಧ ಕೀ.ಮೀ. ದೂರದಲ್ಲಿದೆ ಇದೆ. ಆ ಆರೋಪಿಗಳನ್ನು ಕರೆ ತಂದ ನಂತರ ಆ ಚೀಲದಲ್ಲಿದ್ದ ಮಾಂಸದಲ್ಲಿ ರಕ್ತ ಇರಲಿಲ್ಲ. ಆ ಮಾಂಸದಲ್ಲಿ ಕೂದಲು ಇರಲಿಲ್ಲ. ಅದರಲ್ಲಿ ದಪ್ಪದ ಎಲುಬುಗಳು ಕೂಡ ಇರಲಿಲ್ಲ. ಮಾಂಸಗಳು ಒಂದು ಕೈ ಹಿಡಿ ಗಾತ್ರದ ಮಾಂಸದ ತುಂಡುಗಳು ಇದ್ದವು. ನನ್ನ ಸಮಕ್ಷಮ ಎಷ್ಟು ತುಂಡುಗಳು ಇದ್ದವು ಎಂದು ಲೆಕ್ಕ ಮಾಡಿಲ್ಲ. ನನಗೆ ಎಷ್ಟು ತುಂಡುಗಳು ಇದ್ದವು ಎಂದು ಗೊತ್ತಾಗಿಲ್ಲ. ಆದರೆ ನೋಡಿದಾಗ 6 ರಿಂದ 7 ಕೇಜಿ ಮಾಂಸ ಇದ್ದಿರಬಹುದು ಎಂದು ಗೊತ್ತಾಯಿತು. ಆ ಮಾಂಸಗಳ ತುಂಡುಗಳು ಕೊಟ್ಟೆಯಲ್ಲಿ ಪ್ಯಾಕ್ ಮಾಡಿ ಚೀಲದಲ್ಲಿ ತುಂಬದ್ದರು. ಸಾಕ್ಷಿ ಪುನಃ ಚೀಲದಲ್ಲಿ ನೇರವಾಗಿ ತುಂಬಿದ್ದರು. ಕೊಟ್ಟೆ ಇರಲಿಲ್ಲ. ಚೀಲಕ್ಕೆ ರಕ್ತ ಅಂಟಿರಲಿಲ್ಲ. ಚೀಲವನ್ನು ನೋಡಿದಾಗ ಪ್ರಾಣಿಯ ಮಾಂಸ ಇದೆ ಎಂದು ಗುರುತು ಮಾಡಲು ಆಗಲಿಲ್ಲ. ನಾನು ನೋಡಿದೆ ಎಂದು ಹೇಳುವ ಚೀಲಕ್ಕೆ ರಕ್ತ ಅಂಟಿರಲಿಲ್ಲ. ಮಾಂಸ ಕತ್ತರಿಸಿ ಚೀಲದಲ್ಲಿ ತುಂಬಿದಾಗ ರಕ್ತ ಚೀಲಕ್ಕೆ ಪಸರಿಸುತ್ತದೆ ಎಂದರೆ ಸರಿ. ಕೈ ಹಿಡಿ ಗಾತ್ರದ ಮಾಂಸದ ತುಂಡು ಅರ್ಧ ಕೆ. ಜಿಯಿಂದ 1 ಕೆ. ಜಿ ತೂಕದ ಒಳಗೆ ಇತ್ತು. ಆ ಚೀಲವನ್ನು ವಶಪಡಿಸಿಕೊಂಡರೆ ಎಂದು ಹೇಳುವಾಗ ನಮ್ಮಿಬ್ಬಿರ ಸಹಿಗಳನ್ನು ಆ ಚೀಲಕ್ಕೆ ಪಡೆದಿಲ್ಲ. ನಮ್ಮ ಸಮಕ್ಷಮ ಉಳಿದ ಸಿಬ್ಬಂದಿಗಳು ಅದಕ್ಕೆ ಸಹಿ ಮಾಡಿಲ್ಲ.

15. ಬೈಕ್ ನ್ನು ಯಾರು ತೆಗೆದುಕೊಂಡು ಬಂದರು ನಾನು ನೋಡಿಲ್ಲ. ನಾವು ಅಲ್ಲಿಗೆ ಬಂದ ನಂತರ ಎಲ್ಲಾ ಪ್ರಕ್ರೀಯೆ ಮುಗಿಸಲು 1 ವರೆ ತಾಸು ನಡೆದಿದೆ. ಆರೋಪಿಗಳನ್ನು ಹಿಡಿದುಕೊಂಡು ಯಾರು

ಕಚೇರಿಗೆ ಅಲ್ಲಿಂದ ಬಂದರು ಎಂದು ನಾನು ನೋಡಿಲ್ಲ. ಆರೋಪಿಗಳನ್ನು ಅಲ್ಲಿ ಯಾರು ಹಿಡಿದುಕೊಂಡು ಜೀಪಿನಲ್ಲಿ ಕುಳಿತ್ತಿದ್ದರು ಎಂದು ನಾನು ನೋಡಿಲ್ಲ. ಆರೋಪಿಗಳನ್ನು ಬಂದೋಬಸ್ತಿನಲ್ಲಿ ಹಿಡಿದುಕೊಂಡು ತಪ್ಪಿಸದಂತೆ ಕುಳಿತು ಕೊಳ್ಳಬೇಕು ಎಂದರೆ ಸರಿ. ಚೀಲವನ್ನು ಯಾರು ಹಿಡಿದುಕೊಂಡು ಬಂದರು ಎಂದು ಗೊತ್ತಿಲ್ಲ. ಪಂಚನಾಮೆಗೆ ಸಹಿ ಮಾಡಿ ಎಂದು ಹೇಳಿರುವುದಕ್ಕೆ ನಾನು ಸಹಿ ಮಾಡಿದೆ.

16. ನವಗದ್ದೆ ಅರಣ್ಯ ಪ್ರದೇಶ ಕಂಚಿನಬಾಗಿಲಿನ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. ನವಗದ್ದೆ ಅರಣ್ಯ ಪ್ರದೇಶ ಮೇಲೆ ಹೇಳಿದ ಬಸ್ ನಿಲ್ದಾಣದ ಹಾಗೂ ಕಾಲು ದಾರಿಯ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. ಬಿಡಿಗೌಡರ ತೋಟ 1 ನೇ ಆರೋಪಿಯ ಮನೆ ಮತ್ತು ತೋಟದ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. 1 ನೇ ಆರೋಪಿಯನ್ನು ಹಿಡಿದರು ಎಂದು ಹೇಳುವ ಸ್ಥಳದಿಂದ ಬಿ.ಡಿ.ಗೌಡರ ತೋಟ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. ತಲೆ ಮತ್ತು ಕಾಲು ಸಿಕ್ಕಿತ್ತು ಎಂದು ಹೇಳುವ ಸ್ಥಳದಿಂದ ಬಿಡಿಗೌಡರ ತೋಟ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. ಕಡವೆ ಪ್ರಾಣಿಯ ಹೊಟ್ಟೆಯ ಚೀಲದ ಭಾಗ ಹಾಗೂ ಕರುಳಿನ ಭಾಗ ಬಹಳ ದೊಡ್ಡದು ಇರುತ್ತದೆ. ಕಡವೆ ಸಾಮಾನ್ಯ ಹಸುವಿನಷ್ಟು ದೊಡ್ಡದು ಇರುತ್ತದೆ. ರಾತ್ರಿ ಸತ್ತ ಅಥವಾ ರಾತ್ರಿ ಕೊಂದ ಕಡವೆಯಂತ ಪ್ರಾಣಿಯ ಹೊಟ್ಟೆಯ ಭಾಗ ಹಾಗೂ ಕರುಳಿನ ಭಾಗ ಮರುದಿನ ಬೆಳಿಗ್ಗೆ ಕೊಳೆತು ನಾರುತ್ತದೆ ಎಂದರೆ ಸರಿ. ಹಂದಿಗೆ ಚಿಕ್ಕ ಹೊಟ್ಟೆ ಇರುತ್ತದೆ. ಕಡವೆಯಂತಹ ಪ್ರಾಣಿಯ ಹೊಟ್ಟೆ ಭಾಗ ಹಾಗೂ ಕರುಳಿನ ಭಾಗ ದೊಡ್ಡದು ಇರುವುದರಿಂದ ಹರಿಯುವ ನೀರಿನಲ್ಲಿ ಹಾಕಿದರೆ ಕೂಡಾ ಕೊಚ್ಚಿಕೊಂಡು ಹೋಗುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಅರಣ್ಯ ಸಿಬ್ಬಂದಿಗಳು ಹೊಟ್ಟೆಯ ಭಾಗ ಹಾಗೂ ಕರುಳಿನ ಭಾಗವನ್ನು

ನೀರಿನಲ್ಲಿ ಹುಡುಕಲು ಪ್ರಾರಂಭಿಸಿದರು. ಅಲ್ಲಿ ಸ್ವಲ್ಪ ಸ್ವಲ್ಪ ನೀರು ಇತ್ತು, ಹೊಟ್ಟೆಯ, ಕರುಳಿನ ಭಾಗ ಮತ್ತು ಒಂದು ಮರಿ ಹೊಟ್ಟೆಯ ಒಳಗಡೆ ಇತ್ತು. ನನ್ನ ಸಮಕ್ಷಮ ಆ ಹೊಟ್ಟೆಯ, ಮತ್ತು ಕರುಳಿನ ಭಾಗ ಮತ್ತು ಮರಿಯನ್ನು ಸಿಬ್ಬಂದಿಗಳು ವಶಪಡಿಸಿಕೊಂಡರು. ಅರಣ್ಯ ಸಿಬ್ಬಂದಿಗಳು ಅವುಗಳನ್ನು ವಶಪಡಿಸಿಕೊಂಡು ಪ್ಯಾಕ್ ಮಾಡಿ ಅದರ ಮೇಲೆ ನಮ್ಮ ಸಹಿಗಳನ್ನು ಪಡೆದಿರುತ್ತಾರೆ. ಪಂಚನಾಮೆ ಬರೆದ ಅರ್ಧ ಗಂಟೆ ನಂತರ ಪಶುವೈದ್ಯರು ಬಂದರು. ಆರ್ ಎಫ್ ಓ . ಜೀಪು ನಲ್ಲಿ ಹಾಗೂ ಡಿ. ಆರ್.ಎಫ್.ಓ. ರವರು ಕಾರಿನಲ್ಲಿ ಅರ್ಧ ಗಂಟೆ ನಂತರ ಬಂದರು.

17. ಅದೇ ದಿವಸ ಸಂಜೆ 4 ರಿಂದ 5 ಗಂಟೆಯ ಒಳಗೆ ಗನ್ಯ ಕೆಮಿಕಲ್ಸ್ ಬಳಿ ಜೀಪಿನಲ್ಲಿ ಮೇಲೆ ಹೇಳಿದ್ದ ನಾವೆಲ್ಲ ಹೋಗಿದ್ದೇವು . ಸದ್ರಿ ಗನ್ಯ ಕೆಮಿಕಲ್ಸ್ ರಾಷ್ಟ್ರೀಯ ಹೆದ್ದಾರಿಯಿಂದ 250 ಮೀಟರ್ ದೂರದಲ್ಲಿ ಇದೆ. ಸದ್ರಿ ಗನ್ಯ ಕೆಮಿಕಲ್ಸ್ ರಾಷ್ಟ್ರೀಯ ಹೆದ್ದಾರಿಯ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಮೇಲೆ ಹೇಳಿದಂತಹ ಪ್ರಥಮವಾಗಿ ಇಬ್ಬರು ಆರೋಪಿಗಳನ್ನು ಬೆನ್ನಟ್ಟಿ ಹಿಡಿದ ಜಾಗಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಪಂಚನಾಮೆ ಮಾಡಿಲ್ಲ. ಅವರನ್ನು ಹಿಡಿದರು ಎಂದು ಹೇಳವ ಸ್ಥಳವನ್ನು ನಮ್ಮಿಬ್ಬರನ್ನು ಕರೆದುಕೊಂಡು ಹೋಗಿ ತೋರಿಸಿಲ್ಲ. ಚೀಲ ಸಿಕ್ಕಿದ ಸ್ಥಳದಿಂದ ಗನ್ಯ ಕೆಮಿಕಲ್ಸ್ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಜೀಪು ನಿಲ್ಲಿಸಿದ ಸ್ಥಳದಿಂದ ಯಾವ ದಿಕ್ಕಿನಲ್ಲಿ 1 ನೇ ಆರೋಪಿಯನ್ನು ಹಿಡಿದರು ಎಂದು ಹೇಳುವ ಸ್ಥಳ ಬರುತ್ತದೆ ಎಂದು ಗೊತ್ತಿಲ್ಲ. 1 ನೇ ಆರೋಪಿಯನ್ನು ಇಂತವರು ಹಿಡಿದರು ಎಂದು ನನ್ನ ಹೇಳಿಕೆಯಲ್ಲಿ ಹಾಗೂ ಪಂಚನಾಮೆಯಲ್ಲಿ ನಾನು ಬರೆಸಿಲ್ಲ. ಬಂದುಾಕ ನ್ನು ಯಾವ ಸಿಬ್ಬಂದಿ ತಂದರು ಎಂದು ಬರೆಸಿಲ್ಲ. ತನಿಖಾಧಿಕಾರಿಗಳಿಗೆ ಬಂದೂಕನ್ನು ಯಾರು ತಂದರು ಎಂದು ನಾನು ಹೇಳಿಲ್ಲ. ಬಂದೂಕನ್ನು ಯಾರು ಮತ್ತು ಯಾಕೆ ತಂದರು ಎಂದು ನನಗೆ

ಗೊತ್ತಿಲ್ಲ. ನನ್ನ ಸಮಕ್ಷಮ ಮೊಬೈಲ್ ಫೋನನಲ್ಲಿ ಬೇರೆ ಹಾಗೂ ಉಳಿದ ಆರೋಪಿಗಳ ಮಧ್ಯೆ ಕರೆಗಳು ವಿನಿಮಯ ಆಗಿದೆಯಾ ಎಂದು ಆ ಫೋನಿನ ಕರೆ ಲಿಸ್ಟ್ ನ್ನು ಪರಿಶೀಲಿಸಿರುವುದಿಲ್ಲ. 1 ಮತ್ತು 2 ನೇ ಆರೋಪಿಗಳ ಮಧ್ಯೆ ಅಥವಾ 1 ಮತ್ತು 3 ನೇ ಆರೋಪಿಗಳ ಮಧ್ಯೆ ಕರೆ ವಿನಿಮಯ ಆಗಿರುವುದನ್ನು ನನ್ನ ಮುಂದೆ ಸಿಬ್ಬಂದಿಗಳು ಆ ಫೋನ್ ಪರಿಶೀಲಿಸಿ ಖಚಿತ ಪಡಿಸಿರುವುದಿಲ್ಲ.

18. ಇಬ್ಬರು ಆರೋಪಿಗಳ ಪೈಕಿ ಯಾರು ಚೀಲ ಹಿಡಿದಿದ್ದರು ಎಂದು ನಾನು ನೋಡಿಲ್ಲ. ಆ ಬಗ್ಗೆ ಹೇಳಿಕೆ ಕೂಡಾ ನೀಡಿಲ್ಲ. ನಾನು ಓಡಿ ಹೋದರು ಎಂದು ಹೇಳುವ ಆರೋಪಿಗಳು ಚೀಲವನ್ನು ಬೈಕ್ ಬಳಿ ಬಿಸಾಡಿ ಹೋಗಿರುತ್ತಾರೆ ಎಂದು ಸ್ವತಃ ನೋಡಿಲ್ಲ. ನನ್ನ ಹೇಳಿಕೆಯನ್ನು ಹಾಗೂ ಪಂಚನಾಮೆಯನ್ನು ಈ ರೀತಿ ಬರೆಯ ಬೇಕು ಎಂದು ನಾನು ಹೇಳಿಲ್ಲ. ಕತ್ತಿಯನ್ನು ಯಾರು ತೆಗೆದುಕೊಂಡು ಬಂದರು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಕತ್ತಿಯನ್ನು ಮಂಜುನಾಥ ನಾಯ್ಕ ರವರು ತೆಗೆದುಕೊಂಡು ಬಂದರು. ಚರ್ಮ ವನ್ನು ಮಾಂಸದಿಂದ ಬೇರ್ಪಡಿಸಲು ರೆಡಿಯಮ್ ಕಟ್ಟರ್ ನಂತ ಕಟ್ಟರ್ ಅಥವಾ ಬ್ಲೇಡ್ ಬೇಕಾಗುತ್ತದೆ ಎಂದರೆ ಸರಿ. ನಾನು ನೋಡಿದ ಎಂದು ಹೇಳುವ ಚರ್ಮಕ್ಕೆ ಮಾಂಸಗಳು ಅಂಟಿರುವುದಿಲ್ಲ. ಹೊಟ್ಟೆಯ ಭಾಗ ಬಹಳ ಮೃದು ಬಾಗವಾಗಿರುತ್ತದೆ ಎಂದರೆ ಸರಿ. ಆದ್ದರಿಂದ ಹೊಟ್ಟೆಯ ಭಾಗಕ್ಕೆ ಹೊಕ್ಕ ಗುಂಡು ಮಂದೆ ಚಲಿಸಿ ಹೊರಗೆ ಹೋಗುತ್ತದೆ. ನಾನು ನೋಡಿದ ಚರ್ಮದ ಗುಂಡು ಹೊಕ್ಕಿರುವ ಕುರುಹು ಮಾತ್ರ ನೋಡಿದ್ದೇನೆ, ಹೊರ ಹೋಗಿರುವ ಕುರುಹು ನೋಡಿಲ್ಲ. ಆ ಚರ್ಮದ ಗುಂಡು ಹೊಕ್ಕಿರುವ ಭಾಗ 8 ಎಮ್ ಎಮ್ ರಾಡ್ ಒಳಹೋಗುವಷ್ಟು ತೂತು ಆಗಿತ್ತು.ಕಾದ 8 ಎಮ್ ಎಮ್ ರಾಡ್ ಆ ಭಾಗಕ್ಕೆ ಹೊಕ್ಕಿಸಿದರು ಕೂಡ ಅಷ್ಟೆ ದೊಡ್ಡ ತೂತು ಆಗುತ್ತದೆ ಎಂದರೆ ಸರಿ. ಕಾದ ರಾಡ್ ನ್ನು ಹೊಕ್ಕಿಸಿದರೆ ಚರ್ಮ ಸುಟ್ಟಿರುವುದು

ತೂತಿನ ಎಲ್ಲ ಬದಿಯಲ್ಲಿ ಕಾಣುತ್ತದೆ ಎಂದರೆ ಸರಿ. ಚರ್ಮದ ಭಾಗ ಹಾಗೂ ಕೂದಲು ತೂತಿನ ಬದಿಗೆ ಅಂತಹ ಸಂದರ್ಭದಲ್ಲಿ ಅಂಟಿಕೊಳ್ಳುತ್ತದೆ ಎಂದರೆ ಸರಿ. 1 ನೇ ಆರೋಪಿಯ ಮನೆ ಮತ್ತು ತೋಟವನ್ನು ನೋಡಿದ್ದೇನೆ. 1 ನೇ ಆರೋಪಿಯನ್ನು ಹಿಡಿದರು ಎಂದು ಹೇಳುವ ಸ್ಥಳದಲ್ಲಿ ಸಿಬ್ಬಂದಿಗಳು, ಆರ್ ಎಫ್ ಓ ಅಥವಾ ಡಿ ಆರ್ ಎಫ್ ಒ ನನ್ನ ಸಮಕ್ಷಮ ಬಂದೂಕನ್ನು ತುಂಬಲು ಬಳಸಿ ಉಳಿದ ಮದ್ದು, ಗುಂಡು, ಕೇಪು ಅಥವಾ ಕಾಯಿಕತ್ತಾ  ಮತ್ತು ಹೆಡ್  ಲೈಟ್ ಇದೆಯಾ ಎಂದು 1 ನೇ ಆರೋಪಿಯಲ್ಲಿ ವಿಚಾರಣೆ ಮಾಡಿಲ್ಲ.

19. ನನಗೆ ಸ್ಥಳದಲ್ಲಿ ಪೋಟೊಗಳನ್ನು  ತೋರಿಸಿದ್ದಾರೆ. ಅದೇ ಪೋಟೊಗಳನ್ನು ಈಗ ಹಾಜರು ಪಡಿಸಿರುವದಾ ಎಂದು ನನಗೆ ಗೊತ್ತಿಲ್ಲ.  ಸಾಕ್ಷಿ ಪುನಃ ಸ್ಥಳದಲ್ಲಿ ನನಗೆ ಪೋಟೊ ತೋರಿಸಿಲ್ಲ. ಕಚೇರಿಯಲ್ಲಿ ನನಗೆ ಪೋಟೊಗಳನ್ನು ತೋರಿಸಿದ್ದಾರೆ. ಕಚೇರಿಯಲ್ಲಿ ತೋರಿಸಿರುವ ಪೋಟೊವನ್ನು ನಾನು ಈ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಪೋಟೊಗಳನ್ನು ಈ ರೀತಿ ತೆಗೆಯಿರಿ ಎಂದು ನಾವಿಬ್ಬರು ಹೇಳಿಲ್ಲ. ಸಿಬ್ಬಂದಿಗಳು ಅವರ ಮನಸ್ಸಿಗೆ ಬಂದಂತೆ  ತೆಗೆದಿರುತ್ತಾರೆ.  ಕಚೇರಿಯಲ್ಲಿ ನನಗೆ ತೋರಿಸಿದ ಪೋಟೊಗಳನ್ನು ನ್ಯಾಯಾಲಯದಲ್ಲಿ ಗುರುತಿಸಬೇಕು ಎಂದು ನನಗೆ ಹೇಳಿದ್ದರು.

20. ನಾನು ಹೇಳಿದಂತಹ ಬಂದೂಕು ಲೋಡ್ ಆಗಿತ್ತಾ  ಅಥವಾ ಖಾಲಿ ಇತ್ತಾ ಎಂದು ನನ್ನ ಸಮಕ್ಷಮ ಪರೀಕ್ಷಿಸಿಲ್ಲ. ಬಂದೂಕನ್ನು ಶಸ್ತ್ರಗಾರದ ಸಿಬ್ಬಂದಿ ಆ ಬಂದೂಕನ್ನು ಅನ್ ಲೋಡ್ ಮಾಡಿದ್ದಾರಾ ಹಾಗೂ ಅವರೇನಾದರೂ ಆ ಬಗ್ಗೆ ಕ್ರಮ ಕೈಗೊಂಡರಾ  ಎಂದು ನಾನು ನೋಡಿಲ್ಲ.

ಮದ್ದು ಮತ್ತು ಗುಂಡನ್ನು ನಾನು ನೋಡಿಲ್ಲ. ಚರ್ಮದ ತುಂಡನ್ನು ಪ್ಯಾಕ್ ಮಾಡಿರುವ ಬಗ್ಗೆ ಸಹಿ ಮಾಡಲು ಹೇಳಿರುವುದರಿಂದ ಸಹಿ ಮಾಡಿರುತ್ತೇನೆ. ಅವನ್ನು ಪ್ಯಾಕ್ ಮಾಡಿದರು ಎಂದು ಹೇಳುವ ಸಂದರ್ಭ ದಲ್ಲಿ ಈ ರೀತಿ ಬರೆಯಬೇಕು ಎಂದು ನಾನು ಹೇಳಿದ್ದೇನಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನುಡಿಯುತ್ತಾರೆ. ಆ ಚರ್ಮವನ್ನು ಯಾಕೆ ಪ್ಯಾಕ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೂರ್ತಿ ಚರ್ಮವನ್ನು ಹಾಗೂ ತುಂಡು ಮಾಡಲಾಯಿತು ಎಂದು ಹೇಳುವ ಚರ್ಮವನ್ನು ನನ್ನ ಸಮಕ್ಷಮ ಸುತ್ತಳತೆ ಯನ್ನು ಅಳತೆ ಮಾಡಿಲ್ಲ. ನಿ ಪಿ -14 ರಂತಹ ಸಿಡಿ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಆ ಸಿ ಡಿಯಲ್ಲಿ ಏನು ಇದೆ ಎಂದು ನನಗೆ ಅದನ್ನು ಕಂಪ್ಯೂಟರ್ ಗೆ ಹಾಕಿ ತೋರಿಸಿಲ್ಲ. ಅದು ಸಿ ಡಿ ಎಂದು ನನಗೆ ಸಿಬ್ಬಂದಿ ಹೇಳಿರುವುದರಿಂದ ಸಿ ಡಿ ಎಂದು ಹೇಳಿದೇನು.

21. ವಲಯ ಕಚೇರಿಯಲ್ಲಿ ಪಂಚನಾಮೆ ಬರೆದರು ಎಂದು ಹೇಳುವ ಪಂಚನಾಮೆಯನ್ನು ಸಿಬ್ಬಂದಿಗಳೇ ಬರೆದಿರುವುದು. ನ್ಯಾಯಾಲಯದ ಮುಂದೆ ನಾನು ಹೇಳಿರುವ ಮುಖ್ಯ ವಿಚಾರಣಾ ಸಂಗತಿಗಳನ್ನು ಫಾರೇಸ್ಟ್ ರು ಹೇಳಿರುವುದರಿಂದ ಹೇಳಿದ್ದೇನೆಂದರೆ ಸರಿ. ನನಗೆ ಅರಣ್ಯ ಇಲಾಖೆ ಯವರು ವಲಯ ಅರಣ್ಯ ಕಚೇರಿಗೆ ಕರೆಸಿಲ್ಲ ಹಾಗೂ 1 ನೇ ಆರೋಪಿ ಕಡವೆ ಹೊಡೆದಿದ್ದಾರೆಂದು ಹೇಳಿಲ್ಲ ಹಾಗೂ ನಾನು ಚಾಸಾ-1, 3 ಮತ್ತು 5 ರಿಂದ 7 ರವರ ಜೊತೆ ಜೀಪಿನಲ್ಲಿ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಹೋಗುವ ಅಡ್ಡ ರಸ್ತೆಯಲ್ಲಿ ಯಾವುದೇ ಬೈಕ್ ಇರಲಿಲ್ಲ. ಆ ನಂತರ ಇಬ್ಬರು ಪ್ಲಾಸಿಕ್ ಚೀಲ್ ಹಿಡಿದು ನಿಂತಿರಲಿಲ್ಲ ಹಾಗೂ ನಮ್ಮನ್ನು ನೋಡಿ ಓಡಿ ಹೋಗಿಲ್ಲ ಮತ್ತು ಸಿಬ್ಬಂದಿ ಹಿಡಿದಿದ್ದೇ ಇಲ್ಲ ಎಂದರೆ ಸರಿಯಲ್ಲ.

ಸಿ. ಸಿ. ನಂ. 17/2022

ಪಿ.ಡಬ್ಲ್ಯೂ–2

ಸಿ.ಡಬ್ಲ್ಯೂ–2

22. ನಾನು ಮನೆಯಲ್ಲಿ ದನ, ಎಮ್ಮೆ ಸಾಕುತ್ತೇನೆ. ಅವುಗಳು ಗರ್ಭ ಧರಿಸಿರುವಾಗ ಹೊಟ್ಟೆಯಲ್ಲಿ ಮರಿ ತಿರುಗಿದಾಗ ಅವುಗಳು ಸಾವನ್ನಪ್ಪವ ಸಾಧ್ಯತೆ ಇದೆ ಎಂದರೆ ಸರಿ. ಆ ರೀತಿ ಸತ್ತಂತಹ ಕಡವೆಯನ್ನು ಈ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲು ಅರಣ್ಯ ಇಲಾಖೆಯವರು ಉಪಯೋಗಿಸಿದ್ದಾರೆ ಎಂದರೆ ಸರಿಯಲ್ಲ. ನವಗದ್ದೆ ಅರಣ್ಯ ಪ್ರದೇಶದಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಬೇಟೆಗಾರರು ಕಡವೆ ಬೇಟೆಯಾಡುತ್ತಿದ್ದು ಅವರಿಂದ ಲಾಭ ಪಡೆದುಕೊಂಡು ಅರಣ್ಯ ಇಲಾಖೆಯವರು ಕ್ರಮ ಜರಗಿಸಿಲ್ಲ ಎಂದು ವೃತ್ತ ಪತ್ರಿಕೆಯಲ್ಲಿ ಪ್ರಕಟಣೆಗಳು 2020 ನೇ ಸಾಲಿನಲ್ಲಿ ಬರುತ್ತಿತ್ತು ಎಂದರೆ ಸರಿ. ಆದ್ದರಿಂದ, ಅಂತಹ ಆರೋಪ ತಪ್ಪಿಸಲು ನ್ಯಾಯಾಲಯದ ಮುಂದೆ ಇರುವ ಅಮಾಯಕ ಆರೋಪಿಗಳ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿರುವುದಕ್ಕೆ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವ ನಾನು ಮೂಲಾಜಿಗೆ ಒಳಗಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಅರಣ್ಯ ಇಲಾಖೆಯವರು ಸೃಷ್ಟಿಸಿದ ಸುಳ್ಳು ಸಾಕ್ಷಿಗಳು ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಮಾಂಸವನ್ನು, ಬೈಕ್ ನ್ನು ಅಮಾನತ್ತು ಪಡಿಸಿಲ್ಲ. ನಿ ಪಿ –1 ಮಹಜರನ್ನು ಬರೆದಿಲ್ಲ ಹಾಗೂ ನಿಪಿ 1 ನ್ನು ಕಚೇರಿಯಲ್ಲಿ ಸೃಷ್ಟಿಸಿರುವುದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ತಲೆಭಾಗ, ಹೊಟ್ಟೆಭಾಗ ಹಾಗೂ ಮಾರಿಯನ್ನು ಬಂದೂಕು ಕತ್ತಿಯನ್ನು ವಶಪಡಿಸಿಲ್ಲ ಹಾಗೂ ಪಶು ವೈದ್ಯಾಧಿಕಾರಿಗೆ ಮಾದರಿ ಚರ್ಮ ವನ್ನು ಕತ್ತರಿಸಿ ತೆಗೆದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ನಿ ಪಿ –7 ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಗಳನ್ನು ಬಂದಿಸಿಲ್ಲ ಹಾಗೂಾ ಮೊಬೈಲ ಪೊನನ್ನು ವಶಪಡಿಸಿಲ್ಲ, ಪಂಚನಾಮೆ ನಿಪಿ 20 ನ್ನು ಜರೂಗಿಸಿಲ್ಲ, ನಿ ಪಿ26 ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ಪೋಟೊಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಗಳನ್ನು ನೋಡಿ ಸಿಬ್ಬಂದಿಗಳು ಹೇಳಿದ ರೀತಿ ಅವರೇ ಆರೋಪಿಗಳು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.